**ದಿನಾಂಕಃ 21/11/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:** ಆರೋಪಿತರ **ಪರ ಶ್ರೀ** ಎಸ್.ಎಸ್.ಎಂ **ವಕೀಲರಿಂದಃ**

1. ನಮ್ಮ ಜಮೀನಿನ ಪೂರ್ವ ದಿಕ್ಕಿನಲ್ಲಿ 10 ಅಡಿ ಬಿಟ್ಟು ನರೇಗಾ ಯೋಜನೆಯಡಿಯ ರಸ್ತೆ ಇದೆ. ನಾವು, ಆರೋಪಿತರು ಮತ್ತು ಅಕ್ಕಪಕ್ಕದ ಜಮೀನಿನವರು ಅದೇ ರಸ್ತೆಯಲ್ಲಿ ಓಡಾಡುತ್ತೇವೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿರುವ ರಸ್ತೆ ನರೇಗಾ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿದ ರಸ್ತೆ ಎಂದರೆ ಹೌದು ಎಂದು ನುಡಿಯುತ್ತಾರೆ. ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನಾವು, ಆರೋಪಿತರು ನಿಡಿ.1 ರಲ್ಲಿ ಕಾಣಿಸಿದ ರಸ್ತೆಯಲ್ಲಿ ಓಡಾಡುತ್ತೇವೆ ಎಂದರೆ ಸರಿ. ನಿಡಿ.1 ರಲ್ಲಿ ಕಾಣಿಸುವ ತಂತಿಬೇಲಿಯನ್ನು ನಾನೇ ಹಾಕಿಸಿರುತ್ತೇನೆ. ನಾನು ರಸ್ತೆಯನ್ನು ಸೇರಿಸಿ ಬೇಲಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ನಾನು ರಸ್ತೆಗೆ ಬೇಲಿ ಹಾಕಿಸಿ ತಡೆಯುಂಟುಮಾಡಿದ್ದು ಆರೋಪಿತರು ಅದನ್ನು ಕೇಳಿದಾಗ ನಾನೇ ಅವರ ಮೇಲೆ ಹಲ್ಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ಹಲ್ಲೆಯನ್ನು ಗ್ರಾಮದಲ್ಲಿ ಬಗೆಹರಿಸಿಕೊಳ್ಳೋಣ ಎಂದು ಕೇಳಿದಾಗ ನಾನು ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿಲ್ಲ, ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಬರೆದಿಲ್ಲ, ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾರ್ವಜನಿಕರ ರಸ್ತೆಯನ್ನು ಕಬಳಿಸುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**